# ಜನಸಂಖ್ಯಾ ದಿನ; ಹೊಸ ಸಮೀಕರಣ

**ಘಟನೆ** 1

'ನಾನು ನಿಮ್ಮನ್ನು ಹೆದರಿಸುತ್ತಿಲ್ಲ. ನಿಮಗೆಲ್ಲ ತಿಳಿದೇ ಇದೆ, ಜನಸಂಖ್ಯೆ ಕಡಿಮೆಯಾಗುತ್ತಾ ಹೋಗಿ ಕೋಣೆಯ ದೀಪವನ್ನಾರಿಸಲು ಒಬ್ಬನೇ ಒಬ್ಬ ಇರುವುದಿಲ್ಲ. ಶೀಘ್ರವಾಗಿ ಏನಾದರೂ ಮಾಡಿ, ನಮ್ಮ ಸಂತತಿ ಅಳಿಯುವುದನ್ನು ತಡೆಯಿರಿ.'

2020 ಸೆಪ್ಟೆಂಬರ್‌ನಲ್ಲಿ ಹಂಗರಿಯ ಪ್ರಧಾನಿ ವಿಕ್ಟರ್ ಓರ್ಬನ್ ಅವರು ವೈದ್ಯರ, ಸಮಾಜ ವಿಜ್ಞಾನಿಗಳ ಸಮಾವೇಶದಲ್ಲಿ ನೀಡಿದ ಕರೆಯಿದು.

**ಘಟನೆ** 2

2019ರ ಸ್ವಾತಂತ್ರ್ಯ ದಿನಾಚರಣೆಯ ದಿನ ಕೆಂಪುಕೋಟೆಯ ವೇದಿಕೆಯಿಂದ ಭಾಷಣ ಮಾಡಿದ ಪ್ರಧಾನಿ ನರೇಂದ್ರ ಮೋದಿ, ದೇಶದ ಯಾವ ಪ್ರಧಾನಿಯೂ ಅದುವರೆಗೂ ಹೇಳದ ಮಾತೊಂದನ್ನು ಹೇಳಿ ಇಡೀ ದೇಶದ ಚಿಂತಕರನ್ನು, ಸಮಾಜ ವಿಜ್ಞಾನಿಗಳನ್ನು ಮತ್ತು ಜನಸಾಮಾನ್ಯರನ್ನು ಚಕಿತಗೊಳಿಸಿದ್ದರು. ಏರುತ್ತಿರುವ ಜನಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, 'ಯಾವ ಕುಟುಂಬ ಕಡಿಮೆ ಮಕ್ಕಳನ್ನು ಹೊಂದುತ್ತದೋ, ಅದು ದೇಶಭಕ್ತಿಯ ಸಂಕೇತ' ಅಥವ 'ಚಿಕ್ಕ ಕುಟುಂಬ ದೇಶಪ್ರೇಮದ ಕುರುಹು' ಎಂದಿದ್ದರು. ನೆರೆದಿದ್ದ ಜನ ಕಿವಿಗಡಚಿಕ್ಕುವಂತೆ ಕರತಾಡನ ಮಾಡಿದ್ದರು.

ಪ್ರಧಾನಿ ಭಾಷಣದ ಮೇಲೆ ಉದ್ದುದ್ದ ಚರ್ಚೆ ಮಾಡಿದ ಜನಸಂಖ್ಯಾ ತಜ್ಞರು, ಟೀವಿ ಆ್ಯಂಕರ್‌ಗಳು ಹೊಸ ಸತ್ಯಗಳನ್ನೇ ಜಗತ್ತಿನ ಮುಂದೆ ತೆರೆದಿಟ್ಟರು. ಆ ಎಲ್ಲ ಚರ್ಚೆಗಳ ಸಾರ: ಭಾಷಣಗಳಲ್ಲಿ ಮಾತ್ರ ಜನಸಂಖ್ಯೆ ಸ್ಫೋಟಿಸುತ್ತಿದೆ. ವಾಸ್ತವವಾಗಿ ಇಡೀ ವಿಶ್ವದ ಜನಸಂಖ್ಯೆ ಕುಸಿಯುತ್ತಿದೆ. ಆಫ್ರಿಕಾವನ್ನು ಹೊರತುಪಡಿಸಿ ಜಗತ್ತಿನ ಎಲ್ಲ ಕಡೆ ಶಿಶ ಜನನ ಪ್ರಮಾಣ ಕಡಿಮೆಯಾಗಿದೆ, ನಮ್ಮ ದೇಶವೂ ಇದಕ್ಕೆ ಹೊರತಲ್ಲ!

ವಿಶ್ವಸಂಸ್ಥೆಯ ಲೆಕ್ಕಾಚಾರದ ಪ್ರಕಾರ 2050ರ ವೇಳೆಗೆ ವಿಶ್ವದ ಜನಸಂಖ್ಯೆ 970 ಕೋಟಿ ಆಗಲಿದೆ ಮತ್ತು ಈ ಶತಮಾನದ ಕೊನೆಗೆ 1000 ಕೋಟಿ ದಾಟಲಿದೆ. 'ನೋ ವೇ, ಚಾನ್ಸೇ ಇಲ್ಲ, ಅಬ್ಬಬ್ಬಾ ಎಂದರೆ 2050ಕ್ಕೆ 800 ಕೋಟಿ ತಲುಪಬಹುದು' ಎಂದಿರುವ ಜನಸಂಖ್ಯಾ ತಜ್ಞರು, ಅದಕ್ಕೆ ಕೆಳಗಿನಂತೆ ವಿವರಣೆಯನ್ನೂ ನೀಡಿದ್ದಾರೆ.

**ಮ್ಯಾಜಿಕ್ ನಂಬರ್** 2.1

ಜನಸಂಖ್ಯಾ ಸ್ಫೋಟ ಈಗಲೂ ಸಂಭವಿಸುತ್ತಿದೆಯೆ? ಎಂಬಪ್ರಶ್ನೆಗೆರಾಜಕಾರಣಿಗಳು 'ಹೌದು' ಎನ್ನುತ್ತಾರೆ. ಜನಸಂಖ್ಯೆ ವಿಜ್ಞಾನಿಗಳು 'ಇಲ್ಲ' ಎಂದು ಹೇಳುತ್ತಾ ನಿರೂಪಿಸಿರುವ ಒಟ್ಟು ಫಲವತ್ತತೆ ದರ (**Total Fertility Rate – TFR**) ಆಧರಿಸಿ ನಿಖರವಾಗಿ ಉತ್ತರ ನೀಡುತ್ತಾರೆ. ಸಂತಾನೋತ್ಪತ್ತಿ ಸಾಮರ್ಥ್ಯವಿರುವ ಹೆಣ್ಣೊಬ್ಬಳು ಹೆರಬಹುದಾದ ಮಕ್ಕಳ ಸರಾಸರಿ ಸಂಖ್ಯೆಯನ್ನು 'ಟಿಎಫ್‌ಆರ್' ಎನ್ನುತ್ತಾರೆ. ಟಿಎಫ್‌ಆರ್ 2.1ಕ್ಕಿಂತ ಮೇಲಿದ್ದರೆ ಜನಸಂಖ್ಯೆ ಹೆಚ್ಚುತ್ತಿದೆ, ಅದಕ್ಕಿಂತ ಕೆಳಗಿದ್ದರೆ ಜನಸಂಖ್ಯೆ



ಕಡಿಮೆಯಾಗುತ್ತಿದೆ ಮತ್ತು ಅದಕ್ಕೆ ಸಮನಾಗಿದ್ದರೆ ಸ್ಥಿರಗೊಂಡಿದೆ ಎಂದು ಅರ್ಥೈಸುತ್ತಾರೆ. ಯಾವುದೇ ದೇಶ ಅಥವಾ ರಾಜ್ಯದ 'ಟಿಎಫ್‌ಆರ್' 2.1 ಆಗಿದ್ದರೆ ವಿಶ್ವಸಂಸ್ಥೆಯ ತಜ್ಞರು ಅದನ್ನು 'ಪುನರ್‌ಸ್ಥಾಪನೆ ದರ' (ರಿಪ್ಲೇಸ್‌ಮೆಂಟ್ ರೇಟ್, ರಿಪ್ಲೇಸ್‌ಮೆಂಟ್ ಲೆವೆಲ್) ಎನ್ನುತ್ತಾರೆ. ತಂದೆ ತಾಯಿಗಳು ಕಾಲವಾದ ಮೇಲೆ ಅವರ ಜಾಗಕ್ಕೆ ಇಬ್ಬರು ಮಕ್ಕಳು ಬರುತ್ತಾರೆ. ಆಗ ಅವರು ತಮ್ಮ ಪೋಷಕರನ್ನು ರಿಪ್ಲೇಸ್ ಮಾಡುತ್ತಾರೆ. ಇದೇ ರಿಪ್ಲೇಸ್‌ಮೆಂಟ್ ದರ. ಉದಾಹರಣೆಗೆ, ಹತ್ತು ಗಂಡ ಹೆಂಡತಿ ಜೋಡಿ, ಅಂದರೆ 20 ಜನ 21 ಮಕ್ಕಳಿಗೆ ಜನ್ಮ ನೀಡಿದರೆ ಆಗ ಪ್ರತೀ ಜೋಡಿ 2.1 ಮಕ್ಕಳಿಗೆ ಜನ್ಮ ನೀಡಿದಂತಾಗುತ್ತದೆ. ಆಗ 'ಟಿಎಫ್‌ಆರ್' 2.1 ಎನ್ನುತ್ತೇವೆ. ಈ 2.1ನ್ನು ತಂದೆಗೆ ಒಂದು, ತಾಯಿಗೆ ಒಂದು ಎಂದು ವಿಂಗಡಿಸಿದರೆ ಉಳಿದ 0.1ನ್ನು ಶಿಶು ಮರಣ ಪ್ರಮಾಣ ಅಥವಾ ತಾಯಿ ಆಗುವುದಕ್ಕೂ ಮುನ್ನ ಮರಣ ಹೊಂದುವ ಮಹಿಳೆಯರ ಪ್ರಮಾಣ ಎನ್ನುತ್ತಾರೆ. ನಮ್ಮ ದೇಶದ 'ಟಿಎಫ್‌ಆರ್' 2.2 ಆಗಿದ್ದು ರಿಪ್ಲೇಸ್‌ಮೆಂಟ್ ರೇಟ್‌ಗೆ ತುಂಬ ಹತ್ತಿರವಿದೆ. ಇದು ಒಳ್ಳೆಯ ಸೂಚನೆಯೆಂದಿರುವ ತಜ್ಞರು, ಇದೇ ದರವನ್ನು ಮುಂದಿನ 20 ವರ್ಷ ಕಾಯ್ದುಕೊಂಡರೆ 'ಟಿಎಫ್‌ಆರ್' 2.1 ಆಗಿ ಜನಸಂಖ್ಯೆ ಸ್ಥಿರತೆ ಗಳಿಸಿ, ದೇಶಕ್ಕೆ ಬೇಕಾದ ಅಭಿವೃದ್ಧಿ ಸಾಧ್ಯವಾಗುತ್ತದೆ ಎನ್ನುತ್ತಾರೆ.

1960ರಲ್ಲಿ ವಿಶ್ವದಾದ್ಯಂತ 4.9ರಷ್ಟಿದ್ದ 'ಟಿಎಫ್‌ಆರ್', 50 ವರ್ಷಗಳ ನಂತರ 2.5ಕ್ಕಿಳಿದಿದೆ. 1978ರಲ್ಲಿ ಚೀನಾ 'ಒಂದೇ ಮಗು' ನೀತಿ ಜಾರಿಗೆ ತಂದ ನಂತರ 2.94ರಷ್ಟಿದ್ದ 'ಟಿಎಫ್‌ಆರ್', 2016ರಲ್ಲಿ 1.6ಕ್ಕೆ ಇಳಿದಿತ್ತು. ಆ ಅವಧಿಯಲ್ಲಿ ಭಾರತದಲ್ಲೂ 'ಟಿಎಫ್‌ಆರ್' 4.96ರಿಂದ 2.27ಕ್ಕಿಳಿದಿತ್ತು, ಈಗಾಗಲೇ ವಿಶ್ವದ ಅರ್ಧದಷ್ಟು ದೇಶಗಳಲ್ಲಿ 'ಟಿಎಫ್‌ಆರ್' ರಿಪ್ಲೇಸ್‌ಮೆಂಟ್ ರೇಟ್‌ಗಿಂತ ಕಡಿಮೆ ಇದೆ. ನಮ್ಮ ಹಲವು ರಾಜ್ಯಗಳ'ಟಿಎಫ್‌ಆರ್' 2.1ಕ್ಕಿಂತ ಕಡಿಮೆ ಇದ್ದು (ಪಟ್ಟಿಯನ್ನು ಗಮನಿಸಿ), ಇನ್ನು ಮುಂದೆ ಜನಸಂಖ್ಯೆ ಯದ್ವಾತದ್ವಾ ಏರುವುದಿಲ್ಲ ಎಂಬುದು ಖಾತ್ರಿಯಾಗಿದೆ.

'ನ್ಯಾಷನಲ್ ಫ್ಯಾಮಿಲಿ ಹೆಲ್ತ್' ಸರ್ವೆ–4ರ ಪ್ರಕಾರ, 2015–16ರಲ್ಲೇ ನಮ್ಮ 'ಟಿಎಫ್‌ಆರ್' 2.2 ತಲುಪಿತ್ತು. 'ಎಂಪ್ಟಿ ಪ್ಲಾನೆಟ್' ಕೃತಿಯ ಲೇಖಕ ಡರೆಲ್ ಬ್ರಿಕರ್ ಸಹ ಭಾರತದ 'ಟಿಎಫ್‌ಆರ್' ಈಗಾಗಲೇ ರಿಪ್ಲೇಸ್‌ಮೆಂಟ್ ಹಂತ ತಲುಪಿದೆ ಎಂದು ಹೇಳಿದ್ದಾರೆ. ದೇಶದ 8 ಕೇಂದ್ರಾಡಳಿತ ಪ್ರದೇಶ ಮತ್ತು 17 ರಾಜ್ಯಗಳಲ್ಲಿ 'ಟಿಎಫ್‌ಆರ್' ರಿಪ್ಲೇಸ್‌ಮೆಂಟ್ ಹಂತ ತಲುಪಿರುವುದನ್ನು